ಕಣ್ಣು ಹಾಯಿಸಿದಷ್ಟೂ ವಿಸ್ತಾರವಾಗಿದ್ದ ಹೊಳೆಗೋಣಿ ನಮ್ಮನ್ನು ಪ್ರತಿದಿನ ಬರಮಾಡಿಕೊಳ್ಳುತ್ತಿತ್ತು. ಬದಲಾವಣೆ ಅನಿವಾರ್ಯವೋ, ಅಥವಾ ಈಗಿನ ಪೀಳಿಗೆಯ ಮನಃಸ್ಥಿತಿಯೋ, ಅಥವಾ ಗಿಡಮರಗಳಂತೆ ಬಯಲೂ ಕೆಲವು ಜನರಿಗೆ ಬೇಡವಾಗಿದೆಯೋ, ಒಟ್ಟಿನಲ್ಲಿ ಹೊಳೆಗೋಣಿಯ ಚಿತ್ರಣ ಬದಲಾಗಿದೆ. ಬಯಲಿಗೂ ಪೇಟೆಗೂ ವ್ಯತ್ಯಾಸವಿಲ್ಲದಂತಾಗಿದೆ. ಪ್ರವಾಸಿಗರಿಗಾಗಿ ಚಿಕ್ಕಪುಟ್ಟ ಹೋಟೆಲುಗಳು ತಲೆ ಎತ್ತಿವೆ. ಪ್ರವಾಸಿಗರ ವಾಹನಗಳ ನಿಲುಗಡೆ, ಅವುಗಳನ್ನು ತೊಳೆಯುವುದು ಎಲ್ಲಾ ಹೊಳೆಗೋಣಿಯಲ್ಲೇ. ಊರವರು ಹೊಳೆಸ್ನಾನ, ಬಟ್ಟೆ ಒಗೆಯುವುದು ಇಂತಹುವುದಕ್ಕೆಲ್ಲಾ ಈಗ ಹೋಗುವುದೇ ಇಲ್ಲ. ಈಗ ಹೊಳೆಗೋಣಿ(ಗಾಂಧಿಮೈದಾನ)ಯಲ್ಲಿ ಕೆಲವು ಕಾರ್ಯಕ್ರಮಗಳು ಮಾತ್ರ ನಡೆಯುತ್ತವಷ್ಟೇ. ಮಕ್ಕಳು ಆಟವಾಡಲು ಅಲ್ಲಿಗೆ ಹೋಗುವುದಿಲ್ಲ. ಶಾಲೆಗೆ ಹೋಗಿಬಂದು, ಮಾರನೇ ದಿನಕ್ಕೆ ಹೋಂವರ್ಕ್ ಮಾಡುವುದು ಇತ್ಯಾದಿ ಅವರಿಗೆ ದಿನನಿತ್ಯದ ಪರಿಪಾಠವಾಗಿದೆ. ಕೆಲವು ಶಾಲೆಗಳಿಗೆ ಅವುಗಳದೇ ಆಟದ ಮೈದಾನವಿದೆಯಾದರೂ, ಮೊಬೈಲ್ – ಕಂಪ್ಯೂಟರ್ ಇವುಗಳಲ್ಲಿ ಬರುವ ಚಿತ್ರವಿಚಿತ್ರ ಆಟಗಳನ್ನು ಆಡುವವರಿಗೆ ಬಯಲಿನಲ್ಲಿ ಆಡುವ ಮಜಾ ತಿಳಿಯದಾಗಿದೆ. ನಾಲ್ಕು ಗೋಡೆಗಳ ಮಧ್ಯೆ ಬಂದಿಯಾಗ ಬಯಸುವವರಿಗೆ ಬಯಲಿನಲ್ಲಿ ದೊರೆಯುವ ಸ್ವಾತಂತ್ರ್ಯದ ಅರಿವು, ಆನಂದ ಸಿಗಲು ಹೇಗೆ ಸಾಧ್ಯ? ಹೊಳೆ – ಗಿಡ – ಮರ– ಬಯಲು – ಮಣ್ಣು ಇವುಗಳ ಸಾನಿಧ್ಯದಲ್ಲಿ, ಅವುಗಳ ಸ್ಪರ್ಶಸುಖ, ಭಾವಬಂಧದಲ್ಲಿ, ಎಲ್ಲವನ್ನೂ ಮರೆತು ಪ್ರಕೃತಿಯೊಡನೆ ನಾವೇ ನಾವಾಗಿ ಆಟವಾಡುತ್ತಾ ಕಾಲ ಕಳೆಯುವುದಿದೆಯಲ್ಲ? ಕಾಸು ಕೊಟ್ಟರೂ ಸಿಗದ ಸಂತೋಷವದು. ಈಗ ಆಧುನಿಕ ತಂತ್ರಜ್ಞಾನ, ಸೌಲಭ್ಯದಿಂದೊಡಗೂಡಿದ ಥಿಯೇಟರ್‌ಗಳು ಪಕ್ಕದ ಊರಿಗೆ ಬಂದಿದೆ. ಹಾಗಾಗಿ ನಮ್ಮೂರಲ್ಲಿ ಟೆಂಟೂ ಇಲ್ಲ, ಥಿಯೇಟರೂ ಇಲ್ಲ. ಜನರಿಗೆ ಬೇಕಾದಾಗ ಪಕ್ಕದೂರಿಗೆ ಹೋಗಿ ಸಿನಿಮಾ ನೋಡಿ ಬರುತ್ತಾರೆ. ನಮಗೆ ಮಾತ್ರ ಹೊಳೆಗೋಣಿಯಲ್ಲಿ ಆಟವಾಡಿದ ಬಾಲ್ಯದ ದಿನಗಳು, ಟೆಂಟ್ ಸಿನಿಮಾಗಳು ಕೊಡುತ್ತಿದ್ದ ಮಜಾ ಇಂದಿಗೂ ಮನದ ನೆನಪಲ್ಲಿ ಹಸಿರಾಗಿಯೇ ಇದೆ.


**ಅರುಣಾ ಕೆ.ಆರ್.**

ತುಂಗಾ ನದಿ ತೀರದ ಶೃಂಗೇರಿಯವರಾದ ಅರುಣಾ ಈಗ ನೆಲೆಸಿರುವುದು ಬೆಂಗಳೂರಿನಲ್ಲಿ. ಬಿ.ಎಸ್ಸಿ ಪದವಿ ಬಳಿಕ ಕಂಪ್ಯೂಟರ್ ಡಿಪ್ಲೊಮಾ ಮಾಡಿ ಖಾಸಗಿ ಕಂಪೆನಿಯೊಂದರಲ್ಲಿ ಸಹಾಯಕ ಪ್ರೋಗ್ರಾಮರ್ ಆಗಿ ಕೆಲಸ ಮಾಡಿದ ಅನುಭವವಿದೆ. ಕನ್ನಡ ಸಾಹಿತ್ಯ ಪರಿಷತ್ತು ನಡೆಸುವ ಕಾವ ಪರೀಕ್ಷೆಯಲ್ಲಿ ಮೊದಲ ರ್‍ಯಾಂಕ್ ಪಡೆದಿದ್ದಾರೆ. ಕರ್ನಾಟಕ ಮುಕ್ತವಿಶ್ವವಿದ್ಯಾಲಯದ ಕನ್ನಡ ಎಂ.ಎ ಪದವೀಧರೆ.